ಗ್ರೂಪ್‌ಗಳಲ್ಲಿ ಬಕೆಟ್ ಹಿಡಿದು ನಿಂತಿರುವ, ಪೊರಕೆ ಹಿಡಿದು ನಿಂತಿರುವ, ನೋಟಿಸ್ ನೀಡಿರುವ ಸಾಹೇಬ್ರು ಇತ್ಯಾದಿ ಶೀರ್ಷಿಕೆ ಇರುವ ಫೋಟೊಗಳನ್ನ ಶೇರ್ ಮಾಡಿಕೊಳ್ಳಲಾಗಿತ್ತು. ಈರೀತಿಯ ತಮ್ಮ ವಿಪರೀತ ಆಸಕ್ತಿಯಿಂದಾಗಿ 'ಪೊರಕೆ ಸಾಹೇಬ್ರು' ಎಂದೇ ತಾಲ್ಲೋಕ್ಕಿನಾದ್ಯಂತ ಫೇಮಸ್ ಆಗಿರುವ ಸಾಹೇಬ್ರು ಇಂದು ತಮ್ಮ ಶಾಲೆಗೆ ಬಂದೇ ಬರುತ್ತಾರೆಂಬ ಖಾತರಿ ತಿಮ್ಮಪ್ಪ ಮೇಷ್ಟ್ರಿಗೆ ಬಲ್ಲ ಮೂಲಗಳಿಂದ ಸಿಕ್ಕಿತ್ತು.

ಹೊಸ ಸಾಹೇಬ್ರ ವೀರಾವೇಶಕ್ಕೆ ಬೆದರಿ ಬೆಂಡಾಗಿದ್ದ ಶಿಕ್ಷಕ ಸಮೂಹ ತಾ ಮೇಲು ನಾಮೇಲು ಎಂದು ಚೊಂಬು ಬಕೆಟ್ ಹಿಡಿದು ತಿರುಗಾಡುತ್ತಿತ್ತು. ನಗರದ ಅಂಗಡಿಗಳಲ್ಲಿದ್ದ ಪೆನಾಯಿಲ್ ಬ್ಲೀಚಿಂಗ್ ಪೌಡರ್‌ಗಳು ಶರ ವೇಗದಿ ಖರ್ಚಾಗತೊಡಗಿದ್ದವು. ಇಷ್ಟೆಲ್ಲ ಸಂಚಲನ ಮೂಡಿಸಿರುವ ಸಾಹೇಬ್ರು ಇಂದು ತಿಮ್ಮಪ್ಪ ಮೇಷ್ಟ್ರಿರುವ ತಿಪ್ಪಾಪುರ ಶಾಲೆಗೆ ಭೇಟಿ ನೀಡುತ್ತಿರುವುದರ ಹಿಂದಿನ ಉದ್ದೇಶ ಕೇವಲ ಶೌಚಾಲಯದ್ದು ಮಾತ್ರವಾಗಿರದೆ, ಮತ್ತೊಂದು ಗಂಭೀರ ಬಗೆಯ ಆರೋಪದ ತನಿಖೆಗೂ ಸಂಬಂಧಿಸಿತ್ತು.

ಹೆಚ್ಚು ಕಡಿಮೆ ಇಪ್ಪತ್ತೈದು ವರ್ಷದಿಂದಲೂ ಒಂದೇ ಶಾಲೆಯಲ್ಲಿ ಸರ್ವೀಸ್ ಕಳೆದಿರುವ ತಿಮ್ಮಪ್ಪ ಮೇಷ್ಟ್ರು ಎಪ್ಪತ್ತು ಎಂಭತ್ತರ ಸುಮಾರಿಗೆ ಬಂದಿರುವ ತಿಪ್ಪಾಪುರದ ಬಹುತೇಕ ಸೊಸೆಯರಿಗಿಂತ ಹಿರಿಯರು. ಇವರು ಅಪಾಯಿಂಟ್ ಆದ ಮೊದಲ ವರ್ಷಗಳಲ್ಲಿ ಸ್ಟೂಡೆಂಟ್ ಆಗಿದ್ದ ಅದೆಷ್ಟೋ ಮಂದಿ, ತಮಗೆ ಹುಟ್ಟಿದ ಮಕ್ಕಳನ್ನು ಮೊಮ್ಮಕ್ಕಳನ್ನೂ ತಿಮ್ಮಪ್ಪ ಮೇಷ್ಟ್ರ ಬಳಿಯಲ್ಲೇ ಓದಲು ಸೇರಿಸಿದ್ದರು. ಅಂದರೆ ಈ ಊರಿನ ಮೊದಲ ಮತ್ತು ಆನಂತರದ ಉಳಿದೆರಡು ತಲಮಾರಿಗೂ ತಿಮ್ಮಪ್ಪ ಮೇಷ್ಟ್ರೆ ಅಕ್ಷರದಾತರಾಗಿದ್ದರು. ಹೀಗೆ ತಿಪ್ಪಾಪುರ ಗ್ರಾಮದ ಸಕಲವನ್ನೂ ಬಲ್ಲ ಮೇಷ್ಟ್ರು ಮೊದಮೊದಲು ಚನ್ನಾಗಿ ಹೊಡೆಯುತ್ತಾರೆಂದು ಕೀರ್ತಿಗೆ ಪಾತ್ರರಾಗಿದ್ದರು. ಒಂದು ತಲಮಾರಿಗೆ ಹೀಗೆ ಕೀರ್ತಿವಂತರಾಗಿದ್ದ ಮೇಷ್ಟ್ರು ಬರು ಬರುತ್ತ ತಮ್ಮ ಮಕ್ಕಳ ಕಾಲಕ್ಕೆ ಶಸ್ತ್ರಾಸ್ತ್ರವನ್ನು ತ್ಯಜಿಸಿ, ನಿರಾಯುಧರಾಗಿ ಪ್ರೀತಿ ವಾತ್ಸಲ್ಯದಿಂದ ಮಕ್ಕಳೊಂದಿಗೆ ಬೆರೆಯತೊಡಗಿದ್ದರು. ಇದಕ್ಕೆ ಕಾರಣ ಬಹುಶಃ ಮೊದಲಿಗೆ ಅವಿವಾಹಿತರಾಗಿ ಬಂದಿದ್ದ ಮೇಷ್ಟ್ರು ವಯಸ್ಸಿಗೆ ತಕ್ಕಂತೆ ಸಿಡುಕು ಸಿಟ್ಟನ್ನು ಹೊಂದಿದ್ದರು. ತಡವಾಗಿ ಗೃಹಸ್ಥ ಜೀವನಕ್ಕೆ ಪ್ರವೇಶಿಸಿ ಸ್ವಂತ ಮಕ್ಕಳು ಮರಿಗಳನ್ನು ಪಡೆದ ನಂತರ ತಣ್ಣಗಾಗಿದ್ದರು. ಮೇಷ್ಟ್ರ ಕೈಯಲ್ಲಿ ಬೆತ್ತ ಇಲ್ಲದ್ದನ್ನು ಕಂಡ ಮಕ್ಕಳು ಗಂಟೆ ಕಟ್ಟಿಸಿಕೊಂಡಿರುವ ಬೆಕ್ಕಿನ ಸುತ್ತ ಚಲ್ಲಾಟವಾಡುವ ಇಲಿಗಳಂತೆ ಮೈಮೇಲೆಲ್ಲ ಬಿದ್ದು ಒದ್ದಾಡುತ್ತಿದ್ದವು. ಯಾರಾದ್ರು 'ಇದೇನ್ ಮೇಷ್ಟ್ರೆ ನಮ್ಮ ಕಾಲ್ದಲ್ಲಿ ನಿಮ್ಮುನ್ನ ನೋಡಿರೆ ಮಾರು ದೂರ ಓಡೋಗಿವು, ಈ ಕಾಲ್ದಗೆ ಮಕ್ಳಿಗೆ ಭಯ ಭಕ್ತಿನೆ ಇಲ್ದಂಗಾಗೈತೆ' ಎಂದು ಆಕ್ಷೇಪಿಸುತ್ತಿದ್ದರು. ಆಗೆಲ್ಲ ಮೇಷ್ಟ್ರು 'ಈ ಕಾಲ್ದಗೆ ಮಕ್ಳುನ್ನ ಹೊಡೆಯಂಗಿಲ್ಲ ಕಣ್ರಿ, ಕಾನೂನು ಮಾಡೆವ್ರೆ, ಹೊಡುದ್ರೆ ನಮ್ಮುನ್ನೆ ಸಸ್ಪೆಂಡ್ ಮಾಡ್ತರೆ' ಎಂದು ಎದೆಯ ದನಿಯನ್ನು ಪಿಸುಗುಡುತ್ತಿದ್ದರು. ಏನೇ ಸಮಜಾಯಿಷಿ ಕೊಟ್ಟರು 'ಮೇಷ್ಟ್ರು ಹುಡುಗರ ಜೊತೆ ಸಲಿಗೆಯಿಂದ ಇರ್ತರೆ, ಸರಿಯಾಗಿ ಏನೂ ಕಲಿಸಲ್ಲ' ಎಂಬುದು ಬರು ಬರುತ್ತ ತಿಮ್ಮಪ್ಪ ಮೇಷ್ಟ್ರು ಮೇಲಿನ ಆರೋಪವಾಗಿ ಉಳಿದು ಮನೆಮಾತಾಗಿತ್ತು. ತಿಮ್ಮಪ್ಪನವರೂ ಸಹ 'ಜನ ಏನಾರ ಅಂದ್ಕಳ್ಳಿ ಅಮೇಲೆ ಸಿಗಾಕ್ಯಂಡ್ರೆ ಇವರ‍್ಯಾರು ಉಳಿಸಕೆ ಬರಲ್ಲ' ಎಂದು ಬೆತ್ತವನ್ನ ಕಾಣೆಸದಂತೆ ಮರೆಯಲ್ಲಿ ಇಟ್ಟಿರುತ್ತಿದ್ದರು.

ಊರ ಜನರ ಈ ಅಸಮಾಧಾನದ ಬೆನ್ನಲ್ಲೆ ಮೇಷ್ಟ್ರು ಇಲಾಖೆಯ ಸುತ್ತೋಲೆಯಂತೆ ಶಾಲೆಯ ಸುತ್ತಮುತ್ತ ನೂರಡಿ ಜಾಗದಲ್ಲಿ ತಂಬಾಕು ಧೂಮಪಾನ ಮಾಡಬಾರದು ಎಂಬ ಬೋರ್ಡನ್ನು ಬರೆಸಿ ಎಲ್ಲರಿಗೂ ಕಾಣುವ ಜಾಗದಲ್ಲಿ ನೇತಾಕಿದ್ರು. ಪ್ರತಿ ಊರುಗಳಲ್ಲು ಇಂಥ ಬೋರ್ಡು ಇದ್ರು ಸತ್ತಂಗೆ ಇರುತ್ತಾದ್ರು ತಿಮ್ಮಪ್ಪ ಮೇಷ್ಟ್ರು ಅದನ್ನ ಅಕ್ಷರಶಃ ಜಾರಿಗೆ ತರಲು ಹೊರಟಿದ್ದರು. ಇದಕ್ಕೆ ಕಾರಣ ಪ್ರತಿ ನಿತ್ಯ ಶಾಲೆಗೆ ಬಂದಾಗ ಮೇಷ್ಟ್ರನ್ನ ಸ್ವಾಗತಿಸುತ್ತಿದ್ದುದು ಸ್ಕೂಲ್ ಸುತ್ತಮುತ್ತ ಚೆಲ್ಲಾಡಿರುವ ಬೀಡಿ ಸಿಗರೇಟಿನ ಮೋಟುಗಳು, ಎಣ್ಣೆ ಬಾಟ್ಲುಗಳು. ತಮ್ಮಿಂದ ಅರ್ಧಂಬರ್ಧ ವಿದ್ಯೆ ಕಲಿತಿದ್ದ ಹಳೆಯ ವಿದ್ಯಾರ್ಥಿಗಳೆ ಹೀಗೆಲ್ಲ ರಾತ್ರಿನೊತ್ತು ತಾವು ಕಲಿತ ಶಾಲೆಯನ್ನೇ ಬಾರ್ ಮಾಡಿಕೊಳ್ಳುತ್ತಿದ್ದಾರೆಂಬುದನ್ನು ಪತ್ತೆಹಚ್ಚಿಕೊಂಡಿದ್ದರು. ಅದನ್ನೆಲ್ಲ ನೋಡಿ ಅಸಹ್ಯ ಪಟ್ಟುಕೊಂಡು ಹಾಲೀ ವಿದ್ಯಾರ್ಥಿಗಳ ಕೈನಲ್ಲೂ, ಕಲವೊಮ್ಮೆ ಸ್ವತಃ ತಾವೇ ಗುಡಿಸಿ ಎತ್ತಾಕುತ್ತಿದ್ದರು. ಅಪಾಯಿಂಟ್ ಆದ ಪ್ರಾರಂಭದಲ್ಲಿ